


## ಮಾಹಿತಿಪೂರ್ಣ

‘2016; ಸಂಭ್ರಮ, ವಿಷಾದ, ನಿಷೇಧ’ ಬಿ.ಎಂ. ಹನೀಫ್ ಅವರ ಮುಖಪುಟ ಲೇಖನ (ಸುಧಾ. ಜ.5) ಮಾಹಿತಿಪೂರ್ಣ.

—ಮಹಾವೀರ ಕಾಸರ ಶಿವಮೊಗ್ಗ, ಕೃಷ್ಣ ಜೋಶಿ ಧಾರವಾಡ, ಗಾಣಧಾಳು ರಾಮಣ್ಣ ಚಿತ್ರದುರ್ಗ, ಬಿ.ಎಸ್. ರಮೇಶ್ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಸಿ.ಪಿ.ಕೆ. ಮೈಸೂರು,ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

## ಸ್ಮರಿಸಬೇಕಿತ್ತು..

‘ನೆಳಲು ಬೆಳಕಿನ ಸಿನಿ ಚಿತ್ರ’ (ರಘುನಾಥ ಚ.ಹ.) ಲೇಖನದಲ್ಲಿ 2016ರಲ್ಲಿ ಅನೇಕ ಚಿತ್ರಗಳು ಸಾಗರದಾಚೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಪ್ರದರ್ಶಿತವಾದದ್ದನ್ನು ಸ್ಮರಿಸಬೇಕಿತ್ತು.

—ಮುಕುಂದ ಹೆರಕಲ್ಲ ಕಲಬುರಗಿ

## ಸಮಯೋಚಿತ

‘ನಿಮ್ಮೊಡನೆ’ಯಲ್ಲಿ ‘ಹೆದ್ದಾರಿಯಲ್ಲಿ ಮದ್ಯದಂಗಡಿ’ (ಬಿ.ಎಂ. ಹನೀಫ್) ಬರಹ ಸಮಯೋಚಿತ. ಸರ್ಕಾರ ಕೇವಲ ಆದಾಯದ ದೃಷ್ಟಿಯಲ್ಲೇ ಎಲ್ಲವನ್ನೂ ನೋಡುತ್ತಿರುವುದು ವಿಷಾದನೀಯ.

—ರಾಜಶೇಖರ ಹಾದಿಮನಿ ಧಾರವಾಡ, ಶ್ರೀನಾಥ್ ಕೊನೇಟಿ ಬೆಂಗಳೂರು ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ನಾರಾಯಣಯಾಜಿ ಶಿರಾಲಿ

## ವೈದ್ಯರ ಸಾಧನೆ

‘ವೈದ್ಯರ ಮನೆ ಹಿತ್ತಲಲ್ಲಿ ಸಸ್ಯಕಾಶಿ’ (ವಿ. ಬಾಲಕೃಷ್ಣ ಶಿರ್ವ) ಅದ್ಭುತವಾಗಿದೆ. ವಾಸ್ತವವಾಗಿ ಅದು ಹಿತ್ತಲಲ್ಲ; ಅದೊಂದು ಪ್ರಯೋಗಶಾಲೆ. ತಮ್ಮ ಮನೆಯ ಹಿತ್ತಲಿನಲ್ಲಿ ನೂರಾರು ಬಗೆಯ ಹಣ್ಣುಗಳಿಗೆ ಕಸಿ ಮಾಡಿ ನಂದನವನವನ್ನೇ ಸೃಷ್ಟಿಸಿರುವ ಡಾ. ಮೃತ್ಯುಂಜಯ ಅವರ ಸಾಧನೆ ಶ್ಲಾಘನೀಯ.

—ರವೀಂದ್ರನಾಥ ಶಿ. ಯಡಹಳ್ಳಿ, ಪ್ರೊ.ಜಿ. ಚಂದ್ರಶೇಖರ್ ಮೈಸೂರು, ಡಿ.ಎಸ್. ಪಂಕಜ ಸುಬ್ರಹ್ಮಣ್ಯ ಬೆಂಗಳೂರು, ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ

## ಮನಸೋಲದವರಿಲ್ಲ

‘ಚೌಡಯ್ಯನವರಿಲ್ಲದ ಅರ್ಧ ಶತಮಾನ’ (ಎನ್. ಜಗನ್ನಾಥಪ್ರಕಾಶ್) ಲೇಖನ ಚೆನ್ನಾಗಿದೆ. ಇವರ ಪಿಟೀಲು ವಾದನಕ್ಕೆ ಮನಸೋಲದವರಿಲ್ಲ.

—ಎಸ್.ವಿ. ಶ್ರೀನಿವಾಸನ್ ಬೆಂಗಳೂರು, ಎಸ್.ಸುಂದರ್ ಬೆಂಗಳೂರು, ಬಿ.ಎಸ್. ರಮೇಶ್, ಮಧುರ ಸುಬ್ರಹ್ಮಣ್ಯ ಬೆಂಗಳೂರು

## ಆಕರ್ಷಕ ಚಿತ್ರ ಬರಹ

‘ಕಾರ್ಲಾ; ಕಲ್ಲು ಬಂಡೆಯ ಕಲಾಗಾರ’ (ಚಂದ್ರಕಾಂತ ಮಸಾನಿ) ಚಿತ್ರ ಬರಹ ಆಕರ್ಷಕ. ಕಾರ್ಲಾದ ಗುಹಾಂತರ ದೇವಾಲಯದಲ್ಲಿರುವ ನರ್ತಕಿ ಹಾಗೂ ಕಲಾಕೆತ್ತನೆಗಳು ಬೇಲೂರಿನ ಸಾಲುಭಂಜಿಕೆಗಳನ್ನು ಹೋಲುವಂತಿದ್ದು ಅದ್ಭುತವಾಗಿವೆ.

—ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ, ಕೊಹಿಮ ಬಸರಕೋಡು

## ಕಾರು ಸ್ಪರ್ಧೆ

‘ಕಾರು ಸ್ಪರ್ಧೆ ಜೋರು!’ (ಗಿರೀಶ ದೊಡ್ಡಮನಿ) ಲೇಖನ ಮಾಹಿತಿಪೂರ್ಣವಾಗಿತ್ತು. ದೇಶದ ಒಟ್ಟು ರೇಸ್ ಕಾರ್ ಚಾಲಕರಲ್ಲಿ ಅರ್ಧದಷ್ಟು ಕರ್ನಾಟಕದವರೆಂದರೆ ನಂಬಲಾಗಲಿಲ್ಲ. ಜೊತೆಗೆ ಹೆಮ್ಮೆಯೂ ಅನಿಸಿತು. ಹರ್ಷಿತಾ ಗೌಡ ಸಾಧನೆ ಪ್ರಶಂಸಾರ್ಹ.

—ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

## ಸಹಜ ಸುಂದರಿ

‘ವಜ್ರದೊಡವೆಯ ಪ್ರೀತಿ’ (ಉಮಾ ಅನಂತ್) ಹೇಮಮಾಲಿನಿ ಸಹಜವಾಗಿಯೇ ಸುಂದರಿ. ವಜ್ರದೊಡವೆಯಲ್ಲಿ ಚಿರಯೌವ್ವನೆಯಂತೆ ಕಾಣುವ 68 ವಯಸ್ಸಿನ ಹೇಮಮಾಲಿನಿ ನೋಡಲು ಕಣ್ಣಿಗೆ ಹಬ್ಬ. ಅವರ ಆಹಾರ ಪದ್ಧತಿ, ದಿನನಿತ್ಯದ ವ್ಯಾಯಾಮ ಇವೆಲ್ಲವೂ ಆಕೆಯ ಮೈಮಾಟವನ್ನು ಒಪ್ಪವಾಗಿಸಿದೆ. ನಿರಾಡಂಬರ ಸುಂದರಿಯರಿಗೆ ಒಡವೆಗಳ ಅಗತ್ಯ ಇಲ್ಲ.

—ರಮ್ಯಾ ಬೆಳ್ಳಾವೆ ಉಡುಪಿ, ಮಧುರಾ ಎಸ್. ಬೆಂಗಳೂರು

